ಗ್ರಾಮೀಣ ಕೃಪಾಂಕ ನೀಡಿಕೆ ಬಗ್ಗೆ

1428 (1700) ಶ್ರೀ ಮೋಹನ್ ಕೆ. ಶೆಟ್ಟಿ (ಕುಮಟ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಗ್ರಾಮೀಣ ಕೃಪಾಂಕದ ಬಗ್ಗೆ ತೆಗೆದುಕೊಂಡ ನಿರ್ಧಾರಗಳೇನು?

ಆ) ಸರ್ಕಾರದ ನಿರ್ಧಾರಗಳು ವಿಳಂಬವಾದಲ್ಲಿ ನೇಮಕಾತಿಇಲ್ಲದೆ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಗ್ರಾಮೀಣ ಅಭ್ಯರ್ಥಿಗಳಿಗೆ ಕೃಪಾಂಕ ನೀಡುವ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ, ಈ ವಿಷಯ ಕುರಿತು ಅಧ್ಯಯನ ಮಾಡಿ, ಸರ್ಕಾರಕ್ಕೆ ವರದಿ ಸಲ್ಲಿಸಲು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ ಉನ್ನತ ಮಟ್ಟದ ಆಯೋಗವನ್ನು ರಚಿಸಲಾಗಿದೆ. ಆಯೋಗ ನೀಡುವ ವರದಿಯನ್ನು ಸ್ವೀಕರಿಸಿದ ನಂತರ ನಿರ್ಣಯ ಕೈಗೊಳ್ಳಲಾಗುವುದು.

ಆ) ಮೂರು ತಿಂಗಳ ಒಳಗೆ ಸದರಿ ಆಯೋಗ ಸರ್ಕಾರಕ್ಕೆ ವರದಿಯನ್ನು ನೀಡತಕ್ಕದೆಂದು ವಿಧಿಸಲಾಗಿದೆ.

ಇ) ಸಾರ್ವಜನಿಕರಿಗೆ ಅಗತ್ಯ ಸೇವೆಗಳನ್ನು ಒದಗಿಸುವ ಇಲಾಖೆ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಅನುಮತಿ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರು ಮಹಾನಗರ ಪಾಲಿಕೆಯವರು ನಿರ್ಮಿಸುತ್ತಿರುವ ಮೇಲು ಸೇತುವೆಯ ಅಸಮರ್ಪಕ ನಿರ್ವಹಣೆ

1430 (1560) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬೆಂಗಳೂರು ಮಹಾನಗರ ಪಾಲಿಕೆಯವರು ನಿರ್ಮಿಸಿರುವ ಸಿರಸಿ ವೃತ್ತದಿಂದ ಸಿಟಿ ಮಾರುಕಟ್ಟೆವರೆಗಿನ ಮೇಲು ಸೇತುವೆಯು ಯಾವ ಯಾವ ಮಾರ್ಗಗಳಿಗೆ ಸಂಪರ್ಕವನ್ನು ಕಲ್ಪಿಸುತ್ತದೆ.

2) ಈ ಮೇಲು ಸೇತುವೆಯನ್ನು ಎಂದು ಸಾರ್ವಜನಿಕ ಸಂಚಾರಕ್ಕಾಗಿ ತೆರೆಯಲಾಯಿತು:

3) ಈ ಸೇತುವೆಯ ನಿರ್ವಹಣೆಯನ್ನು ಯಾರಿಗೆವಹಿಸಲಾಗಿದೆ ಹಾಗೂ ಈ ನಿರ್ವಹಣೆಗೆ ತಗಲುವ (ವೆಚ್ಚ) ಹಣವೆಷ್ಟು;

4) ಈ ಮೇಲು ಸೇತುವೆಯ ನಿರ್ವಹಣೆ ಸರಿಯಿಲ್ಲದೆ ಅಪಘಾತಗಳು ಸಂಭವಿಸುತ್ತಿರುವುದು ನಿಜವಲ್ಲವೇ:

5) ಹಾಗಿದ್ದಲ್ಲಿ ಈ ಸೇತುವೆ ಸಾರ್ವಜನಿಕ ಸಂಚಾರಕ್ಕಾಗಿ ತೆರೆದಾಗಿನಿಂದ ಎಷ್ಟು ಅಪಘಾತಗಳು ಸಂಭವಿಸಿದೆ. ಹಾಗೂ ಇದಕ್ಕೆ ಕಾರಣಗಳೇನು:

6) ಈ ಮೇಲುಸೇತುವೆಯನ್ನು ಉತ್ತಮವಾಗಿ ನಿರ್ವಹಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

1) ಸಿರಸಿ ವೃತ್ತದಿಂದ ಪುರಭವನದವರೆಗಿನ ಮೇಲು ಸೇತುವೆಯು ಪುರಭವನ ಹಾಗೂ ಸಿಟಿ ಮಾರುಕಟ್ಟೆ ಕಡೆಯಿಂದ ಚಾಮರಾಜ ಪೇಟೆ ಕಡೆಗೆ ಹಾಗೂ ಮೈಸೂರು ಕಡೆಗೆ ಹೋಗುವ ವಾಹನಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಹಾಗೆಯೇ ಮೈಸೂರು ಕಡೆಯಿಂದ ಬರುವ ವಾಹನಗಳಿಗೆ ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣದ ಕಡೆಗೆ ಹಾಗೂ ಸಿಟಿ ಮಾರುಕಟ್ಟೆ ಮತ್ತು ಪುರಭವನದ ಕಡೆಗೆ ಹೋಗುವ ವಾಹನಗಳಿಗೆ ಸಂಪರ್ಕವನ್ನು ಕಲ್ಪಿಸುತ್ತದೆ.

2) ದಿನಾಂಕ 17- 12- 1999

3) ಗುತ್ತಿಗೆ ಕಾರಾರಿನ ಪ್ರಕಾರ ಮೇಲು ಸೇತುವೆ ಪೂರ್ಣಗೊಂಡ ದಿನಾಂಕದಿಂದ ಒಂದು ವರ್ಷದವರೆಗೆ ಮೆ: ಎಲ್ ಅಂಡ್ ಟಿ ಸಂಸ್ಥೆ ನಿರ್ವಹಣೆಯನ್ನು ನೋಡಿಕೊಳ್ಳಬೇಕು. ಆದ್ದರಿಂದ ಒಂದು ವರ್ಷ ನಿರ್ವಹಣೆಗೆ ಯಾವುದೇ ವೆಚ್ಚ ತಗಲುವುದಿಲ್ಲ.

4) ಮೇಲುಸೇತುವೆಯ ನಿರ್ವಹಣೆ ಸರಿಯಿಲ್ಲದೆ ಯಾವುದೇ ಅಪಘಾತಗಳು ಸಂಭವಿಸುತ್ತಿರುವುದಿಲ್ಲ.

5) 10 ಮೈಸೂರು ರಸ್ತೆಯಲ್ಲಿ ನೆಲ ರಸ್ತೆಗೆ ಎಡಭಾಗದಲ್ಲಿ ಸೇರುತ್ತಿರುವ ಜಾಗದಲ್ಲಿ ಇಳಿಯುವ ಹಂತದಲ್ಲಿನ ತಿರುವು ಸರಿಯಾಗಿ ವಿನ್ಯಾಸ ಮಾಡಿರುವುದಿಲ್ಲ.

-ಬೆಂಗಳೂರು ಬಾಡಿ ಬಿಲ್ಡರ್ಸ್ ಜಂಕ್ಷನ್‌ನ ಹಂತಿರ ಫ್ಲೈಓವರ್‌ನಲ್ಲಿ ಇಳಿಯುವ ಜಾಗದಲ್ಲಿ ಸರಿಯಾದ ವಿದ್ಯುದ್ದೀಪದ ವ್ಯವಸ್ಥೆ ಇರುವುದಿಲ್ಲ.

-ಫ್ಲೈಓವರ್‌ನಿಂದ ಇಳಿಯುವಾಗ ರಸ್ತೆ ವಿಭಜಕವು ಡೊಂಕಾಗಿರುವುದರಿಂದ ರಾತ್ರಿಯ ಹೊತ್ತಿನಲ್ಲಿ ಸರಿಯಾಗಿ ಕಾಣಿಸುವುದಿಲ್ಲ.

6) ಈ ಮೇಲು ಸೇತುವೆಯ ಮೂಲ ಕಾಮಗಾರಿಯು ಮಾತ್ರ ಮುಗಿದಿದ್ದು, ಮೇಲುಸೇತುವೆಯ ಕೆಳಗಿನ ರಸ್ತೆ ಮತ್ತು ಅಪ್ರೋಚ್ ರಸ್ತೆಯ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಸಿರಸಿ ವೃತ್ತದ ಹತ್ತಿರ ಇರುವ ರ್‍ಯಾಂಪ್ ಹತ್ತಿರ ಹಾಲಿ ರಸ್ತೆಯು ಕಿರಿದಾಗಿದ್ದು ಸಂಚಾರಕ್ಕೆ ತೊಂದರೆಯಾಗಿದ್ದು ರಸ್ತೆಯನ್ನು ರಸ್ತೆಯ ಪಕ್ಕದಲ್ಲಿರುವ ಮುಸ್ಲಿಮ್ಮರ ರುದ್ರಭೂಮಿಯ ಸ್ವಲ್ಪ ಭಾಗವನ್ನು ಸ್ವಾಧೀನ ಪಡಿಸಿಕೊಂಡು ಅಗಲಗೊಳಿಸಲು ಉದ್ದೇಶಿಸಲಾಗಿದೆ. ಹಾಗೂ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿರುವ ರ್‍ಯಾಂಪ್ ಹತ್ತಿರ ರಸ್ತೆಯನ್ನು ಮಾಡುವ ಕಾಮಗಾರಿ ಪ್ರಗತಿಯಲ್ಲಿದ್ದು ಈ ಕಾಮಗಾರಿ ಮುಗಿದ ನಂತರ ನ.ರಾ. ರಸ್ತೆಯನ್ನು ಪುರಭವನದ ಕಡೆಯಿಂದ ಮಾರುಕಟ್ಟೆ ಕಡೆಗೆ ಏಕಮುಖಿ ರಸ್ತೆಯನ್ನಾಗಿ ಮಾಡಿ ಮಾರುಕಟ್ಟೆಯ ಕಡೆಯಿಂದ ಬರುವ ವಾಹನಗಳನ್ನು ಸಿಲ್ವರ್ ಜ್ಯೂಬಿಲಿ ಪಾರ್ಕ್ ರಸ್ತೆಯ ಮುಖಾಂತರ ಬಿಡಲು ಉದ್ದೇಶಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳು ಮುಗಿದ ನಂತರ ಸದರೀ ಸೇತುವೆಯ ಮೇಲೆ ಸಂಚಾರವನ್ನು ಉತ್ತಮವಾಗಿ ನಿರ್ವಹಿಸಬಹುದಾಗಿರುತ್ತದೆ.